ಶ್ರೀ ಎಚ್. ಡಿ. ದೇವೇಗೌಡ.—ಕೆಲವು ಮನೆಗಳನ್ನು ಲೋಕೋಪಯೋಗಿ ಇಲಾಖೆಯವರು ವಿತರಣೆ ಮಾಡುತ್ತಿದ್ದಾರೆ, ಕೆಲವು ಮನೆಗಳನ್ನು ಡಿ ಪಿ.ಎ.ಆರ್ ನವರು ಮಾಡುತ್ತಿದ್ದಾರೆ, ಇನ್ನೂ ಕೆಲವು ಮನೆಗಳನ್ನು ಜಿಲ್ಲಾಧಿಕಾರಿಗಳು ವಸತಿ ಮತ್ತು ನಗರಾಭಿವೃದ್ಧಿ ಇಲಾಖೆಯವರು ಕುಳಿತುಕೊಂಡು ವಿತರಣೆ ಮಾಡುತ್ತಿದ್ದಾರೆ. ತಾವು ಹೇಳಿದಂಥ ಲೋಪದೋಷಗಳ ಬಗ್ಗೆ ತಮ್ಮನ್ನೂ ಕರೆದು ಸಮಾಲೋಚನೆ ಮಾಡಿ ಎಲ್ಲೆಲ್ಲಿ ಆ ರೀತಿ ದೋಷಗಳಿವೆಯೆಂದು ತಾವು ಉಲ್ಲೇಖ ಮಾಡಿದ್ದೀರಿ ಅದಕ್ಕನುಗುಣವಾಗಿ ಪರಿಹಾರ ಕೊಡುತ್ತೇನೆ. ಇವತ್ತಂತ ಮಧ್ಯಾಹ್ನವೇ ಸಾಧ್ಯವಾದರೆ ಕರೆದು ತೀರ್ಮಾನ ಮಾಡುತ್ತೇನೆ. ದೋಷ ಇದ್ದರೆ ಸರಿಪಡಿಸುವುದಕ್ಕೆ ಪ್ರಯತ್ನ ಮಾಡುತ್ತೇನೆ.

ಶ್ರೀ ಎಂ.ಎಸ್. ಕೃಷ್ಣನ್.—ನೋಟೀಸ್‌ಗಳನ್ನು ಕೊಡದಹಾಗೆ ತಡೆಹಾಕಿ.

ಶ್ರೀ ಎಚ್.ಡಿ. ದೇವೇಗೌಡ.– ಪ್ರಶ್ನೋತ್ತರ ವೇಳೆ ಆದಮೇಲೆ ಇವತ್ತೇ ತಮ್ಮನ್ನು ಕರೆಸಿ ತೀರ್ಮಾನ ತೆಗೆದುಕೊಳ್ಳುತ್ತೇನೆ.

ಶ್ರೀ ಎಂ.ಎಸ್. ಕೃಷ್ಣನ್.—ತೀರ್ಮಾನ ನಮ್ಮ ಪರವಾಗಿ ಮಾಡುತ್ತೀರಾ ?

ಶ್ರೀ ಎಚ್.ಡಿ. ದೇವೇಗೌಡ.—ಮುಚ್ಚುಮರೆಯಿಲ್ಲದೆ ಹೇಳುತ್ತೇನೆ, ಏನಾದರೂ ಅನ್ಯಾಯವಾಗಿದ್ದರೆ ಸರಿಪಡಿಸುವುದರ ಬಗ್ಗೆ ಯೋಚನೆ ಮಾಡೋಣ. ಎಲ್ಲೆಲ್ಲಿ ಏನೇನು ಅನ್ಯಾಯವಾಗಿದೆ ಎಂಬುದು ನನಗೆ ಗೊತ್ತಿಲ್ಲ. ತಮ್ಮ ಹತ್ತಿರ ಕೆಲವು ಪ್ರಕರಣಗಳಿರುವುದರಿಂದ ಪ್ರಶ್ನೋತ್ತರ ಮುಗಿದ ಮೇಲೆ ಮೂರೂವರೆ ಗಂಟೆಗೆ ತಾವು ಬನ್ನಿ. ಸಂಬಂಧಪಟ್ಟ ಅಧಿಕಾರಿಗಳನ್ನು ಕರೆಸುತ್ತೇನೆ. ಇದರ ಬಗ್ಗೆ ಸಮಾಲೋಚನೆ ಮಾಡಿಸಿ ನಿರ್ಣಯ ತೆಗೆದುಕೊಳ್ಳೋಣ.

ಶ್ರೀ ಎಂ. ಎಸ್. ನಾರಾಯಣರಾವ್.— ಸಚಿವರು ಕೊಟ್ಟ ಆಂಕಿಅಂಶದಲ್ಲಿ ಪೋಲೀಸ್ ಕ್ವಾರ್ಟರ್ಸ್ ಸೇರಿದೆಯೇ ?

ಶ್ರೀ ಎಚ್.ಡಿ. ದೇವೇಗೌಡ.—ಅದು ಬರುವುದಿಲ್ಲ.

ಬೆಳಗಾವಿ ಜಿಲ್ಲೆಯ ಹುಕ್ಕೇರಿ ತಾಲ್ಲೂಕಿನ ಅಮ್ಮಣಗಿ ಗ್ರಾಮದ ಕೆರೆಯ ನಿರ್ವಾಣ ಕುರಿತಾಗಿ

೧೮೩. ಶ್ರೀ ಮಲ್ಲಾರಗೌಡ (ಸಂಕೇಶ್ವರ); ಲೋಕೋಪಯೋಗಿ ಮತ್ತು ನೀರಾವರಿ ರಾಜ್ಯ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೇ ?

ಅ) ಹುಕ್ಕೇರಿ ತಾಲ್ಲೂಕಿನ ಬೈರಾಪುರ ಹಾಗೂ ಅಮ್ಮಣಗಿ ಗ್ರಾಮದ ಹತ್ತಿರ ಕೆರೆಯ ನಿರ್ವಾಣ ಕೆಲಸ ಪ್ರಾರಂಭವಾಗಿದೆಯೇ ?

ಆ) ಇವೆರಡೂ ಕೆಲಸಗಳಿಗೆ ತಗಲುವ ಹಣದ ಮೆಚ್ಚ ಎಷ್ಟು ?

ಇ) ಇದನ್ನು ಎಷ್ಟು ವರ್ಷಗಳಲ್ಲಿ ಮುಗಿಸಬಹುದು ?

ಈ) ರಾಶಂಗ್, ಅಂಕಲಿಬಾಡ, ಬೋರಗಲ್ಲ, ಮುಸರಗುವೆ, ಹರಗಾಪುರ ಹಾಗೂ ಇನ್ನುಳಿದ ಎಷ್ಟು ಕೆರೆಗಳಿಗೆ ಈಗಾಗಲೇ ಸರಕಾರದಿಂದ ಹುಕ್ಕೇರಿ ತಾಲ್ಲೂಕಿನಲ್ಲಿ ಸಮೀಕ್ಷೆ ನಡೆಸಿ ಕೈಗೊಂಡ ಕ್ರಮಗಳೇನು ?

ಉ) ಅಂದಾಜು ಮತ್ತು ಯೋಜನೆ ಆಗಿ ಸರ್ಕಾರಕ್ಕೆ ಸಲ್ಲಿಸಿದ ವರದಿ ಸರ್ಕಾರದಿಂದ ಮಂಜೂರಾಗಲಿಕ್ಕೆ ತಡವಾಗುತ್ತಿರುವುದಕ್ಕೆ ಕಾರಣಗಳೇನು ?

ಊ) ಬರಗಾಲ ಪೀಡಿತ ಪ್ರದೇಶವಾದ ಹುಕ್ಕೇರಿ ತಾಲ್ಲೂಕಿನಲ್ಲಿ ಉಳಿದ ಕೆರೆಗಳಿಗೆ ಕೆಲಸ ಪ್ರಾರಂಭಿಸುವುದಕ್ಕಾಗಿ ಸರ್ಕಾರದಿಂದ ಆದ್ಯತೆಯ ಮೇರೆಗೆ ಮಂಜೂರಾತಿ ಕೊಡಲು ಕೈಗೊಂಡ ಕ್ರಮವೇನು ?

ಶ್ರೀ ಆರ್. ಎನ್. ಲಕ್ಷ್ಮೀಪತಿ (ಸಣ್ಣ ನೀರಾವರಿ ರಾಜ್ಯ ಮಂತ್ರಿಗಳು).—

ಅ) ಇಲ್ಲ

ಆ) ಬೈರಾಪುರ ಕೆರೆಗೆ ೭೫ ಲಕ್ಷ ರೂಪಾಯಿಗಳು ಹಾಗೂ ಅಮ್ಮಣಿ ಕೆರೆಗೆ ೧೪.೫೮ ಲಕ್ಷ ರೂಪಾಯಿಗಳು

ಇ) ಬೈರಾಪುರ ಕೆರೆಗೆ ಬೇಕಾಗುವ ಜಮೀನನ್ನು ವಶಪಡಿಸಿಕೊಂಡ ನಂತರ ೩ ವರ್ಷಗಳ ಅವಧಿ ಬೇಕಾಗಬಹುದು.
ಅಮ್ಮಣಿ ಕೆರೆ ನಿರ್ಮಾಣಕ್ಕೆ ೨ ವರ್ಷಗಳು ಬೇಕಾಗಬಹುದು.

ಈ) ಈ ಕೆರೆಗಳ ವಿವರಗಳನ್ನು ಲಗತ್ತಿಸಲಾಗಿದೆ.

ಉ) ಕೆಲವು ಕೆರೆಗಳಿಗೆ ಕ್ರಯವು ಪ್ರತಿ ಎಕರೆಗೆ ಜಾಸ್ತಿಯಾಗಿರುವುದರಿಂದ ಮತ್ತು ಇಲಾಖೆಯಿಂದ ಮೋಜಣಿ ಮಾಡಲು ರೈತರಿಂದ ಉಗ್ರ ಪ್ರತಿಭಟನೆ ಇರುವುದರಿಂದ ಮತ್ತು ೧೯೮೬-೮೭ರ ಯಾವ ಕಾರ್ಯಕ್ರಮದಲ್ಲಿಯೂ ಸೇರದೆ ಇರುವುದರಿಂದ ಬೈರಾಪುರ ಮತ್ತು ಅಮ್ಮಣಿ ಕೆರೆಗಳ ಹೊರತು ಇತರ ಕೆರೆಗಳಿಂ ಮಂಜೂರಾಗಿಲ್ಲ

ಊ) ಉಳಿದ ಕೆರೆಗಳನ್ನು ಮೇಲೆ ತಿಳಿಸಿದ 'ಉ' ಪ್ರಶ್ನೆಗೆ ಉತ್ತರವಾಗಿ ಕಳಿಸಿರುವ ವಿವರಗಳ ಕಾರಣಗಳಿಂದ ಮಂಜೂರಾತಿಯನ್ನು ಮಾಡಲಾಗಿಲ್ಲ.

ಕರ್ನಾಟಕ ಸರ್ಕಾರದ ವಿಧಾನ ಸಭೆಯ ಶಾಸಕರಾದ ಶ್ರೀ ವಲ್ಲಾರಗೌಡ ಪಾಟೀಲ ಸಂಕೇಶ್ವರ ಇವರು ಕೇಳಿದ ಚುಕ್ಕೆ ಗುರುತಿನ ಪ್ರಶ್ನೆ ಕ್ರಮಾಂಕ ೨೩೯ಕ್ಕೆ ಉತ್ತರಗಳು

ಹುಕ್ಕೇರಿ ತಾಲ್ಲೂಕಿನಲ್ಲಿ ನೀರಾವರಿ ಕೆರೆಗಳ ಪ್ರತಿಯ ವರದಿ,

	ಕೆಲಸದ ಹೆಸರು	ಅಂದಾಜು ವೆಚ್ಚ	ನೀರಾವರಿ ಕ್ಷೇತ್ರ ಹೆಕ್ಟೇರುಗಳಲ್ಲಿ	ಷರಾ
೧	ರಾಶಿಂಗ ಚಿಕ್ಕ ನೀರಾವರಿ ಕೆರೆ	೫.೬೬	೧೧೦	ಪ್ರಾಥಮಿಕ ಸಂಶೋಧನೆ ವರದಿಯು ಪರಿಶೀಲನೆಯಲ್ಲಿ ಇದೆ ಈ ಕೆಲಸದ ಪೋಜಣಿ ಕಾರ್ಯ ಮಾಡಲು ಆಲ್ಲಿಯ ಮಂಳುಗಡೆಯಾಗತಕ್ಕ ಜಮಿನಿನ ರೈತರಿಂದ ತಕರಾರು ಇದ್ದ ಕಾರಣ ಪೋಜಣೆಯನ್ನು ಪೂರ್ತಿಗೊಳಿಸಿಲ್ಲ
೨	ಅಂಕಲಿ ಚಿಕ್ಕ ನೀರಾವರಿ ಕೆರೆ	೯.೬೪ (೭೮–೭೯ ದರ ಪಟ್ಟಿಯಂತೆ)	೭೩	ಅಂದಾಜು ಪತ್ರಿಕೆಗಳು ಕಾರ್ಯಕಾರಿ ಅಭಿಯಂತ ಚಿಕ್ಕ ನೀರಾವರಿ ವಿಭಾಗ ಇವರ ಕಾರ್ಯಾಲಯದಲ್ಲಿ ಪರಿಶೀಲನೆಯಲ್ಲಿದೆ. ಈ ಕೆರೆಯು ಹಣದ ವ್ಯವಸ್ಥೆಯ ದೃಷ್ಟಿಯಿಂದ ಸಾಧ್ಯವಿಲ್ಲ. ಏಕೆಂಕರೆ ನಿಗದಿಪಡಿಸಿದ ಕ್ರಯವು ಪ್ರತಿ ಎಕರೆಗೆ ಜಾಸ್ತಿ ಆಗುತ್ತದೆ.
೩	ಬಾಡ ಚಿಕ್ಕ ನೀರಾವರಿ ಕೆರೆ	—	—	ಈ ಕೆರೆಯು ಯಾವುದೇ ಕಾರ್ಯಕ್ರಮದಲ್ಲಿ ಸೇರ್ಪಡೆಯಾಗಿಲ್ಲ
೪	ಬೊರಗಲ್ಲು ಚಿಕ್ಕ ನೀರಾವರಿ ಕೆರೆ	೩.೭೭ (೭೪–೭೫ ದರ ಪಟ್ಟಿಯಂತೆ)	೧೮೦	ಪ್ರಾಥಮಿಕ ಸಂಶೋಧನೆ ವರದಿಯು ಕಾರ್ಯಕಾರಿ ಅಭಿಯಂತ ಚಿಕ್ಕ ನೀರಾವರಿ ಅಭಿಯಂತರ ಬೆಳಗಾವಿ ಇವರ ಕಾರ್ಯಾಲಯದಲ್ಲಿ ಪರಿಶೀಲನೆಯಲ್ಲಿದೆ. ಮುಳುಗಡೆಯಾಗತಕ್ಕ ಜಮಿನಿನ ರೈತರಿಂದ ಉಗ್ರ ತಕರಾರು ಇರುವುದರಿಂದ ಪೋಜಣಿ ಕಾರ್ಯ ಮಾಡಲು ಆಗಿಲ್ಲ
೫	ಮಸರಗುಪ್ಪಿ ಚಿಕ್ಕ ನೀರಾವರಿ ಕೆರೆ	೩.೭೭ (೭೮–೭೯ ದರ ಪಟ್ಟಿಯಂತೆ)	೩೭	ಅಂದಾಜು ಪತ್ರಿಕೆಗಳು ಕಾರ್ಯಕಾರಿ ಅಭಿಯಂತ ಚಿಕ್ಕ ನೀರಾವರಿ ವಿಭಾಗ ಇವರ ಕಾರ್ಯಾಲಯದಲ್ಲಿ ಪರಿಶೀಲನೆಯಲ್ಲಿವೆ
೬	ಸರಗಾಪುರ ಚಿಕ್ಕ ನೀರಾವರಿ ಕೆರೆ	೮.೨೩ (೮೨–೮೩ ದರ ಪಟ್ಟಿಯಂತೆ)	೫೪	ಈ ಕೆರೆಯು ಹಣದ ವ್ಯವಸ್ಥೆಯ ದೃಷ್ಟಿಯಿಂದ ಸಾಧ್ಯತೆ ಇಲ್ಲ ಏಕೆಂದರೆ ನಿಗದಿ ಪಡಿಸಿದ ಕ್ರಯವು ಪ್ರತಿ ಎಕರೆಗೆ ಜಾಸ್ತಿ ಆಗುತ್ತದೆ. ಈ ಕೆರೆಯು 'ಸಿ' ಪಟ್ಟಿಯಲ್ಲಿ ಸೇರಿರುತ್ತೆ. ಮತ್ತು ಸರ್ಕಾರದ ೧೯೮೨–೮೩ರ ಆದಾಯ ವೆಚ್ಚಗಳ ಅಂದಾಜಂ ಪಟ್ಟಿಯಲ್ಲಿ ಹಣವನ್ನು ಮಾನ್ಯ ಮಾಡಿಲ್ಲ.
೭	ಬೆಳವಿ ಚಿಕ್ಕ ನೀರಾವರಿ ಯೋಜನೆ	೬.೧೬ (೮೮–೮೧ ದರ ಪಟ್ಟಿಯಂತೆ)	೪೭	ಸದರ

ಶ್ರೀ ಮಲ್ಲಾರ ಗೌಡ ಪಾಟೀಲ್.—ಬೈರಾಪುರ ಮತ್ತು ಅಮ್ಮಣಗಿ ಕೆರೆಗೆ ಎಷ್ಟು ಹಣ ಮಂಜೂರಾಗಿದೆ. ಮತ್ತು ಎರಡೂ ಕೆರೆಗಳ ಕೆಲಸ ಪ್ರಾರಂಭ ಮಾಡುವುದಕ್ಕೆ ನಿಶ್ಚಿತ ಕಾರ್ಯಕ್ರಮವನ್ನು ಏನಾದರೂ ನಿಗದಿಪಡಿಸಿದ್ದೀರಾ? ಇದು ಸುಮಾರು ೨೦ ವರ್ಷದಿಂದ ಆಗಬೇಕಾದ ಕೆಲಸ. ಈ ಕೆಲಸವನ್ನು ಯಾವಾಗ ಪ್ರಾರಂಭ ಮಾಡುತ್ತೀರಿ?

ಶ್ರೀ ಆರ್. ಎನ್. ಲಕ್ಷ್ಮೀಪತಿ.—ಕೆರೆ ಮಾಡುವುದಕ್ಕೆ ಜಮೀನನ್ನು ವಶಪಡಿಸಿಕೊಳ್ಳಬೇಕಾದರೆ ರೈತರು ಪ್ರತಿಭಟನೆ ಮಾಡುತ್ತಿದ್ದಾರೆ. ಜೊತೆಗೆ ಜಮೀನು ಖರೀದಿ ಕೂಡ ಜಾಸ್ತಿಯಾಗಿದೆ ಎಂದು ಹೇಳುತ್ತಿದ್ದಾರೆ. ಒಂದು ವೇಳೆ ಅಷ್ಟು ಬೆಲೆ ಕೊಟ್ಟು ಜಮೀನು ಕೊಂಡುಕೊಂಡರೆ ಫೀಸಿಬಿಲಿಟಿ ಪ್ರಶ್ನೆ ಬರುತ್ತದೆ. ಈ ಕೆಲವು ಕಾರಣಗಳಿಂದ ಕೆಲಸ ಪ್ರಾರಂಭ ಮಾಡುವುದು ತಡವಾಗಿದೆ. ಆದರೂ ಅಕ್ವಿಸಿಷನ್ ಪ್ರೊಸೀಡಿಂಗ್ಸ್ ಮೊದಲನೇ ಕೆರೆಗೆ ಮಾಡುತ್ತಿದ್ದೇವೆ. ಎರಡನೇ ಕೆರೆಗೆ ೧೪ ಲಕ್ಷ ೫೮ ಸಾವಿರ ರೂಪಾಯಿ ವೆಚ್ಚವಾಗುತ್ತದೆ. ಲ್ಯಾಂಡ್ ಅಕ್ವಿಸಿಷನ್ ಪ್ರೊಸೀಡಿಂಗ್ಸ್ ಮತ್ತು ರಿವೈಸ್ಡ್ ಎಸ್ಟಿಮೇಟ್ ತಯಾರಾಗಿದೆ. ತಮ್ಮ ತಾಲ್ಲೂಕಿನಲ್ಲಿ ಬರುವ ಪ್ರತಿಯೊಂದು ಕೆರೆಯ ಕೆಲಸ ತೆಗೆದುಕೊಳ್ಳುವುದಕ್ಕೂ ಅಡಚಣೆಯಾಗುತ್ತಿದೆ. ಏತಕ್ಕೆಂದರೆ ಫಲವತ್ತಾದ ಜಮೀನುಗಳನ್ನು ರೈತರು ಬಿಟ್ಟುಕೊಡುವುದಿಲ್ಲ. ರೈತರು ಉಗ್ರವಾದ ಪ್ರತಿಭಟನೆ ಮಾಡುತ್ತಿದ್ದಾರೆ.

ಶ್ರೀ ಮಲ್ಲಾರಗೌಡ ಪಾಟೀಲ.—ಅಮ್ಮಣಗಿ ಕೆರೆಗೆ ಜಮೀನನ್ನು ವಶಪಡಿಸಿಕೊಂಡಿದ್ದಾರೆ. ಅದಕ್ಕೆ ಹಣ ಕೂಡ ಮಂಜೂರಾಗಿದೆ. ಆದ್ದರಿಂದ ಮಾನ್ಯ ಮಂತ್ರಿಗಳು ಕೊಡುತ್ತಿರುವ ಹೇಳಿಕೆ ಸತ್ಯಕ್ಕೆ ದೂರವಾದುದು. ಜಮೀನನ್ನು ವಶಪಡಿಸಿಕೊಂಡು ಹಣ ಕೂಡ ಮಂಜೂರಾಗಿರುವುದರಿಂದ ಅಮ್ಮಣಗಿ ಕೆರೆ ಕೆಲಸವನ್ನು ನಿಶ್ಚಿತವಾಗಿ ಯಾವ ತಾರೀಖಿನಿಂದ ಪ್ರಾರಂಭ ಮಾಡುತ್ತೀರಿ ಎಂಬುದನ್ನು ಹೇಳುತ್ತಿರಾ!

ಶ್ರೀ ಆರ್. ಎನ್. ಲಕ್ಷ್ಮೀಪತಿ.—ಅಮ್ಮಣಗಿ ಕೆರೆಯ ಕೆಲಸವನ್ನು ಪ್ರಾರಂಭ ಮಾಡುತ್ತೇವೆ.

ಶ್ರೀ ಮಲ್ಲಾರಗೌಡ ಪಾಟೀಲ್.—ಪ್ರತಿಯೊಂದು ಕೆರೆಗೂ ಕ್ರಯ ಹೆಚ್ಚಾಗುತ್ತದೆ ಎಂದು ಉತ್ತರ ಕೊಟ್ಟಿದ್ದೀರಿ. ಇನ್ನು ಮುಂದೆ ಕ್ರಮ ಕಡಿವೆಯಾಗುವುದಕ್ಕೆ ಸಾಧ್ಯವೆ? ಸರ್ಕಾರದಲ್ಲಿ ಇದಕ್ಕೇನಾದರೂ ಯೋಜನೆ ಇದೆಯೇ?

ಶ್ರೀ ಆರ್. ಎನ್. ಲಕ್ಷ್ಮೀಪತಿ.—ಅದಕ್ಕೆ ಲ್ಯಾಂಡ್ ಅಕ್ವಿಸಿಷನ್ ಆಕ್ಟ್ ತಿದ್ದುಪಡಿ ಮಾಡ ಬೇಕಾಗುತ್ತದೆ. ಅದು ಬಹಳ ಕಷ್ಟವಾದ ಕೆಲಸ. ರೈತರು ಈಗ ಜಮೀನು ಕೊಡುವುದು ಕಷ್ಟ—ಪ್ರತಿಭಟನೆ ಮಾಡುತ್ತಿದ್ದಾರೆ. ಸ್ಥಳೀಯ ಶಾಸಕರಾದ ತಾವು ಅಂತಹ ಜನರ ಮನಸ್ಸೊಲಿಸಿ ಜಮೀನು ಕೊಡಿಸಿಕೊಟ್ಟರೆ ತಮ್ಮ ಎಲ್ಲ ಯೋಜನೆಗಳನ್ನೂ ಸಹಾನುಭೂತಿಯಿಂದ ಪರಿಶೀಲಿಸುತ್ತೇವೆ.

ಶ್ರೀ ಮಲ್ಲಾರಗೌಡ ಪಾಟೀಲ್.—ಇದು ಸ್ಥಳದ ಶಾಸಕರು ಮಾಡತಕ್ಕ ಕೆಲಸ ಎಂದು ಮಾನ್ಯ ಮಂತ್ರಿಗಳು ಹೇಳುತ್ತಿದ್ದಾರೆ. ನಾನು ಆ ರೀತಿ ಭಾವನೆ ಮಾಡಿಲ್ಲ. ಸರ್ಕಾರಿ ಅಧಿಕಾರಿಗಳು ರೈತರಿಗೆ ಮನವರಿಕೆ ಮಾಡಿಕೊಡಬೇಕಾಗುತ್ತದೆ. ನಾವು ಮುಂದೆ ಹೋಗಿ ಏನಾದರೂ ಮಾಡುವುದಕ್ಕೆ ಹೋದರೆ ರಾಜಕೀಯ ಮಾಡುತ್ತಾರೆ ಎಂಬ ವಾತಾವರಣ ನಿರ್ಮಾಣವಾಗುತ್ತದೆ. ನಮ್ಮಂಥ ಪಟ್ಟಭದ್ರ ಹಿತಾಸಕ್ತಿಗಳು ಜಮೀನನ್ನು ಬಿಟ್ಟುಕೊಡುವುದಕ್ಕೆ ತಯಾರಿರುವುದಿಲ್ಲ. ಆದ್ದರಿಂದ ಒಂದು ಕೆರೆ ಮಾಡಿದರೆ ಅದರಿಂದ ಎಲ್ಲ ಜನರಿಗೂ ಅನುಕೂಲವಾಗುತ್ತದೆ ಎಂಬುದನ್ನು ಜನರಿಗೆ ಹೇಳಬೇಕು. ತಾವು ಬರಗಾಲಪೀಡಿತ ಪ್ರದೇಶದಲ್ಲಿ ಏನು ಕ್ರಮ ತೆಗೆದುಕೊಳ್ಳುತ್ತೀರಿ; ಮತ್ತು ವಿಶೇಷ ಆಸಕ್ತಿ ವಹಿಸಿ ಕರ್ನಾಟಕದ ಉತ್ತರ ಭಾಗದಲ್ಲಿ ಆಗತಕ್ಕ ತೊಂದರೆ ನಿರ್ಮೂಲನ ಮಾಡಲಿಕ್ಕೆ ಯಾವ ಕ್ರಮ ಕೈಗೊಳ್ಳುತ್ತೀರಿ ಎಂಬುದನ್ನು ಹೇಳಬೇಕು.

ಶ್ರೀ ಲಕ್ಷ್ಮೀಪತಿ.—ಸರ್ವೆ ಮಾಡುವುದಕ್ಕೆ ಕೂಡ ರೈತರು ಬಿಡುತ್ತಿಲ್ಲ. ಅಷ್ಟು ಪ್ರತಿಭಟನೆ ಅಲ್ಲಿದೆ. ಕೆರೆ ನಿರ್ಮಾಣ ಮಾಡಿದರೆ ಎಲ್ಲರಿಗೂ ಅನುಕೂಲವಾಗುತ್ತದೆ, ನಮ್ಮ ಅನುಕೂಲಕ್ಕೋಸ್ಕರ ಬಿಟ್ಟುಕೊಡಬೇಕು ಎಂದು ಮನಸ್ಸು ಒಲಿಸಿದರೆ ಕೆಲಸ ಸುಲಭವಾಗುತ್ತದೆ. ತಾವು ಹೇಳುವ ರೀತಿಯಲ್ಲಿ ರೆವಿನ್ಯೂ ಆಕ್ಟ್ ತಿದ್ದುಪಡಿ ಮಾಡುವುದು ವಿಳಂಬವಾಗುತ್ತದೆ.

ಶ್ರೀ ಮಲ್ಲಾರಗೌಡ ಪಾಟೀಲ್.—ಮಾನ್ಯ ಮಂತ್ರಿಗಳು ಹೇಳುವುದನ್ನು ನಾನು ಒಪ್ಪುತ್ತೇನೆ. ಆದರೆ ಸರ್ಕಾರದವರು ಹೋಗಿ ಜನರಿಗೆ ಮನವರಿಕೆ ಮಾಡುವ ಅವಶ್ಯಕತೆ ಇದೆ. ನಾವು ಒಂದು ಪಕ್ಷದಲ್ಲಿ ಇದ್ದಮೇಲೆ ನಾವು ಹೋಗಿ ಹೇಳಿದರೆ ರಾಜಕೀಯ ಪ್ರಚೋದನೆ ಉಂಟಾಗುತ್ತದೆ. ನಮ್ಮ ಪಕ್ಷ ಇರಬಹುದು, ನಿಮ್ಮ ಪಕ್ಷ ಇರಬಹುದು ...

ಉಪಾಧ್ಯಕ್ಷರು.—ನಿಮಗೇನಾಗಬೇಕು ಎಂಬುದನ್ನು ಹೇಳಿ.

ಶ್ರೀ ಮಲ್ಲಾರಗೌಡ ಪಾಟೀಲ್.—ಅಧಿಕಾರಿಗಳು ಕ್ರಮ ತೆಗೆದುಕೊಂಡು ಜನರ ಮನವೊಲಿಸಿ ನೀರಾವರಿ ಕ್ಷೇತ್ರವನ್ನು ಬೆಳೆಸುವುದಕ್ಕೆ ನಿರ್ದಿಷ್ಟ ಕಾರ್ಯಕ್ರಮ ತೆಗೆದುಕೊಳ್ಳುವುದಕ್ಕೆ ಸಾಧ್ಯವೆ ?

ಶ್ರೀ ಆರ್. ಎನ್. ಲಕ್ಷ್ಮೀಪತಿ.—ಪ್ರತಿಭಟನೆ ಇದ್ದರೂ ಕೂಡ ಅಮ್ಮಿಣಗಿ ಕೆರೆಗೆ ಸರ್ಕಾರ ಅಕ್ವಿಸಿಷನ್ ಪ್ರೊಸೀಡಿಂಗ್ಸ್ ಮಾಡಿದೆ. ನಮ್ಮ ಸುಪರ್ದಿಗೆ ಭೂಮಿ ಬಂದಿದೆ. ಬಜೆಟ್ಟಿನಲ್ಲಿ ಕೂಡ ಹಣವನ್ನು ಸೇರಿಸಲಾಗಿದೆ. ಆದ್ದರಿಂದ ಕೆಲಸವನ್ನು ಶೀಘ್ರವಾಗಿ ಪ್ರಾರಂಭ ಮಾಡುತ್ತೇವೆ. ರೈತರ ಮನವೊಲಿಸಲು ಪ್ರಯತ್ನ ಪಡುತ್ತೇವೆ. ಆಗದಿದ್ದರೆ ಕಾನೂನು ಪ್ರಕಾರ ಅಕ್ವಿಸಿಷನ್ ಪ್ರೊಸೀಡಿಂಗ್ಸ್ ಏನು ಮಾಡಬೇಕೋ ಅದನ್ನು ಮಾಡುವುದಕ್ಕೆ ಪ್ರಯತ್ನ ಮಾಡುತ್ತೇವೆ.

ಶ್ರೀ ಮಲ್ಲಾರಗೌಡ ಪಾಟೀಲ್.—ಪ್ರತಿಯೊಂದು ಪ್ಲಾನ್ ಎಸ್ಟಿಮೇಷನ್ ಡಿವಿಷನಲ್ ಆಫೀಸಿನಿಂದ ಬರುವುದಕ್ಕೆ ಐದಾರು ವರ್ಷಗಳಾಗುತ್ತದೆ. ಎಲ್ಲ ಕೆಲಸವನ್ನೂ ಮಾಡಿಸಿ ನಿರ್ದಿಷ್ಟಪಡಿಸಿದ ವೇಳೆಯಲ್ಲಿ ಕೆರೆ ನಿರ್ಮಾಣ ಕೆಲಸವನ್ನು ಪೂರ್ತಿ ಮಾಡುವುದಕ್ಕೆ ತಾವು ಆದೇಶ ಕೊಡುತ್ತೀರಾ ?

ಶ್ರೀ ಆರ್. ಎನ್. ಲಕ್ಷ್ಮೀಪತಿ.—ತಮ್ಮ ತಾಲ್ಲೂಕಿನ ಪ್ರತಿಯೊಂದು ಕೆರೆ ಕೆಲಸದ ಬಗ್ಗೆಯೂ ಪ್ಲಾನ್ ಮತ್ತು ಎಸ್ಟಿಮೇಟ್ ಆಗಿದೆ. ಆದರೆ ಅಕ್ವಿಸಿಷನ್‌ಗೆ ತೊಂದರೆಯಾಗಿದೆ.

ಶ್ರೀ ಮಲ್ಲಾರಗೌಡ ಪಾಟೀಲ್.—ಮಾನ್ಯ ಲೋಕೋಪಯೋಗಿ ಮಂತ್ರಿಗಳಾದ ದೇವೇಗೌಡರು ಈ ಬಗ್ಗೆ ನಿರ್ದಿಷ್ಟವಾದ ಉತ್ತರವನ್ನು ಹೇಳಬೇಕೆಂದು ಕೇಳಿಕೊಳ್ಳುತ್ತೇನೆ.

ಉಪಾಧ್ಯಕ್ಷರು.—ಪ್ರಶ್ನೆ ಬಹಳ ಸರಳವಾಗಿದೆ. ದಯವಿಟ್ಟು ಕುಳಿತುಕೊಳ್ಳಿ.

ಶ್ರೀ ಎಚ್. ಡಿ. ದೇವೇಗೌಡ.—ಸಣ್ಣ ನೀರಾವರಿ ರಾಜ್ಯ ಮಂತ್ರಿಗಳು ಏನು ಹೇಳಿದ್ದಾರೋ ಅದನ್ನೇ ನಾನು ಪ್ರತಿವಾದನೆ ಮಾಡುತ್ತಿದ್ದೇನೆ. ಅವರು ಕೆಲಸ ಮಾಡಿಸಿಕೊಡುತ್ತೇನೆ. ಎಂದು ಹೇಳಿದ್ದಾರೆ. ಅವರು ನಾನು ಸೇರಿ ಈ ಕೆಲಸ ಮಾಡಿಸಿಕೊಡುತ್ತೇವೆ. ಮಾನ್ಯ ಸದಸ್ಯರು ಸಮಾಧಾನದಿಂದ ಇರಬಹುದು.

ಗಾಂದೂರಿ ನಾಲಾ ಯೋಜನೆ ಬಗ್ಗೆ

೮೮೪. ಶ್ರೀ ಬಾಪುಗೌಡ ದರ್ಶನಾಪೂರ (ಷಹಪುರ).—ಲೋಕೋಪಯೋಗಿ ಮತ್ತು ನೀರಾವರಿ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೇ ?

ಅ) ಗುಲ್ಬರ್ಗ ತಾಲ್ಲೂಕಿನ ಗಾಂದೂರಿ ನಾಲಾ ಯೋಜನೆಯನ್ನು ಮಂಜೂರು ಮಾಡಿದೆಯೇ ?

ಆ) ಹಾಗಿದ್ದಲ್ಲಿ ಈ ಯೋಜನೆಯ ಮಂಜೂರಾತಿ ಮತ್ತು ಅಂದಾಜು ವೆಚ್ಚ ಎಷ್ಟು ?

ಇ) ಸರ್ಕಾರವು ಈ ಯೋಜನೆಗೆ ಕಾರ್ಯಗತಗೊಳಿಸಲು ಸಾಕಷ್ಟು ಹಣವನ್ನು ಒದಗಿಸಿದೆಯೇ ?

ಈ) ಹಾಗಿದ್ದಲ್ಲಿ ಹಣ ಎಷ್ಟು ಒದಗಿಸಿರುತ್ತೆ ? ಮತ್ತು ಈಗ ಯಾವ ಹಂತದಲ್ಲಿ ಕೆಲಸ ನಡೆಯುತ್ತಲಿದೆ ?

ಶ್ರೀ ಹೆಚ್. ಡಿ. ದೇವೇಗೌಡ (ಲೋಕೋಪಯೋಗಿ ಮತ್ತು ನೀರಾವರಿ ಮಂತ್ರಿಗಳು).—

ಅ) ಇಲ್ಲ.